**ಕನ್ನಡ ಸಾಹಿತ್ಯ ಪರಿಷತ್ತನ್ನುಕಟ್ಟಿದ ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್: ನಾಡೋಜ ಡಾ.ಮಹೇಶ ಜೋಶಿ ವಿಶ್ಲೇಷಣೆ**

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರೆಲ್ಲರ ಮಾತೃಸಂಸ್ಥೆಯಾಗಿ ಇಷ್ಟು ವಿಸ್ತಾರವಾಗಿ ಪಡೆದು ಬೆಳೆಯುವುದಕ್ಕೆ ಯುವರಾಜ ಕಂಠೀರವ ನರಸಿಂಹ ರಾಜ ಒಡೆಯರ್ ಅವರ ಕೊಡುಗೆ ಬಹಳ ಮಹತ್ವದ್ದು ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ.ಮಹೇಶ ಜೋಶಿಯವರು ವಿಶ್ಲೇಷಿಸಿದರು. ಅವರು ಇಂದು ಕನ್ನಡ ಸಾಹಿತ್ಯ ಪರಿಷತ್ತು ಏರ್ಪಡಿಸಿದ್ದ ಯುವರಾಜ ಕಂಠೀರವ ನರಸಿಂಹ ರಾಜ ಒಡೆಯರ್ ಅವರ 136ನೆಯ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು. ಸಂಸ್ಥೆಯ ನಿಬಂಧನೆ ಎಂಬುದು ಸಂಸ್ಥೆಗೆ ದಿಕ್ಸೂಚಿ – ಅಂಕುಶವಿದ್ದಂತೆ. ಅದು ಪ್ರಸ್ತುತವಾಗಿರಬೇಕು, ಸಮರ್ಪಕವಾಗಿರಬೇಕು, ಮತ್ತು ಸಮಗ್ರವಾಗಿರಬೇಕು ಎಂದು ಅದುವರೆಗೆ ಹಲವಾರು ವಾರ್ಷಿಕಾಧಿವೇಶನಗಳಲ್ಲಿ ಆಗಿದ್ದ ನಿಬಂಧನೆಯ ತಿದ್ದುಪಡಿಗಳನ್ನೆಲ್ಲ ಸೇರ್ಪಡೆ ಮಾಡಿ ಒಂದೂಗೂಡಿಸಿ ನಿಬಂಧನಾವಳಿಯನ್ನು ಪ್ರಕಟಿಸಿದ್ದು ಅವರ ಮಹತ್ವದ ಸಾಧನೆ. ಪರಿಷತ್ತಿನ ಸಿಬ್ಬಂದಿಗಳಲ್ಲಿ ಸಮಯ ಪಾಲನೆ, ವೇಷಭೂಷಣಗಳಲ್ಲಿ ಶಿಸ್ತನ್ನು ತಂದರು ಎಂದು ನಾಡೋಜ ಡಾ.ಮಹೇಶ ಜೋಶಿ ಯುವರಾಜರ ಕೊಡುಗೆಗಳನ್ನು ಸ್ಮರಿಸಿ ಕೊಂಡರು.

ಪ್ರತಿವಾರವೂ ಸಾರ್ವಜನಿಕ ಕಾರ್ಯಕ್ರಮವಾಗಿ ಉಪನ್ಯಾಸ, ಕಾವ್ಯವಾಚನಗಳ ಕಾರ್ಯಕ್ರಮಗಳನ್ನು ಇಟ್ಟುಕೊಂಡಿದ್ದಕ್ಕೆ ಪರಿಷತ್ತಿಗೆ ಬರುವ ಜನರು ಹೆಚ್ಚಾದರು. ಪರಿಣಾಮವಾಗಿ ಸದಸ್ಯರ ಸಂಖ್ಯೆ ಅಧಿಕವಾಯಿತು. ಇವರ ಕಾಲದಲ್ಲಿ ವಸಂತೋತ್ಸವ ಕಾರ್ಯಕ್ರಮವನ್ನು ಬೇಸಿಗೆ ಕಾಲದಲ್ಲಿ ನಡೆಸುವ ಪದ್ಧತಿಯನ್ನು ಜಾರಿಗೆ ತಂದಾಗ ಒಳ್ಳೆಯ ಪ್ರತಿಕ್ರಿಯೆ ದೊರೆಯಿತು. ನವೀನ ಉಪನ್ಯಾಸಗಳ ಜೊತೆಗೆ ಮನರಂಜನಾ ಕಾರ್ಯಕ್ರಮಗಳನ್ನೂ ಏರ್ಪಡಿಸುತ್ತಿದ್ದರು. ಮನೋವಿಲಾಸದ ಈ ಕಾರ್ಯಕ್ರಮದಲ್ಲೇ ಮನೋವಿಕಾಸದ ಅಂಗವಾಗಿ ಕನ್ನಡ ಗ್ರಂಥ ಪ್ರದರ್ಶನ ಏರ್ಪಾಟಾಯಿತು. ೧೯೩೪ರಲ್ಲಿ ಒಂದು ವಾರ ನಡೆದ ಗ್ರಂಥ ಪ್ರದರ್ಶನದಲ್ಲಿ ೨೪೩೨ ಕನ್ನಡ ಗ್ರಂಥಗಳ ಪ್ರದರ್ಶನವೆಂದರೆ ಆ ಕಾಲಕ್ಕೆ ಅದು ದೊಡ್ಡ ಗ್ರಂಥಪ್ರದರ್ಶನವೇ ಸರಿ.. ಜನರಿಗೆ ವಿನೂತನ ಅನುಭವವನ್ನು ಆ ಪ್ರದರ್ಶನ ಒದಗಿಸಿತು ಎಂದು ಯುವರಾಜ ಕಂಠೀರವ ನರಸಿಂಹ ರಾಜ ಒಡೆಯರ್ ಅವರ ಕೊಡುಗೆಗಳನ್ನು ನಾಡೋಜ ಮಹೇಶ ಜೋಶಿಯವರು ಸ್ಮರಿಸಿಕೊಂಡರು.

ಕರ್ಣಾಟಕ ಸಂಘ ಮೊದಲು ಪ್ರಾರಂಭವಾದುದು ಸೆಂಟ್ರಲ್ ಕಾಲೇಜಿನಲ್ಲಿ ಎ.ಆರ್.ಕೃಷ್ಣಶಾಸ್ತ್ರಿಯವರು ಅದರ ಪ್ರಾರಂಭಕರ್ತರು. ಅನಂತರ ನಾಡಿನ ನಾನಾ ಕಡೆ ಕರ್ಣಾಟಕ ಸಂಘಗಳು ಹುಟ್ಟಿಕೊಂಡವು. ಆಗ ಕನ್ನಡಕ್ಕಾಗಿ ದುಡಿಯುವ ಸಂಘ ಸಂಸ್ಥೆಗಳನ್ನು ಸೇರಿಸಿ ಡಿವಿಜಿ ಅವರು ಅಖಿಲ ಕರ್ಣಾಟಕ ಸಂಘಗಳ ಸಮ್ಮೇಳನ ಏರ್ಪಡಿಸಿದರು. ಇವುಗಳನ್ನು ಪರಿಷತ್ತಿನ ಅಂಗ ಸಂಸ್ಥೆಗಳನ್ನಾಗಿ ಮಾಡ ಬಹುದು ಎನ್ನವುದು ಕಂಠೀರವ ನರಸಿಂಹ ರಾಜ ಒಡೆಯರ್ ಅವರ ಯೋಜನೆ. ಇದರಿಂದ ಯುವ ಸಂಘಟನೆಯನ್ನು ವ್ಯವಸ್ಥಿತವಾಗಿ ಮಾಡಲು ಸಾಧ್ಯವಾಯಿತು. ಸಂಘ ಸಂಸ್ಥೆಗಳನ್ನು ಅಂಗಸಂಸ್ಥೆಗಳ ಸದಸ್ಯತ್ವವನ್ನು ಕುರಿತಂತೆ ಪರಿಷತ್ತು ತನ್ನ ನಿಬಂಧನೆಯಲ್ಲಿ ಸೇರ್ಪಡೆ ಮಾಡಿತ್ತು.ಈ ಪ್ರಯತ್ನಗಳ ಫಲವಾಗಿ ಪರಿಷತ್ತಿನ ಅಂಗಸಂಸ್ಥೆಗಳ ಸಂಖ್ಯೆ ೧0 ಇದ್ದುದ್ದು ೫0ಕ್ಕೆ ಏರಿತು. ಕೆಲವು ಕಡೆ ಕರ್ನಾಟಕ ಸಂಘಗಳಿಗೆ ಅಂಗಸಂಸ್ಥೆಗಳಿದ್ದವು. ಹತ್ತು ಹಲವು ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು

ಪರಿಷತ್ತಿನ ವ್ಯಾಪಕತೆಯನ್ನು ಪ್ರಭಾವವನ್ನು ಹೇಗೆ ಬೆಳೆಸಬಹುದೆಂಬುದನ್ನು ಕಂಠೀರವ ನರಸರಾಜ ಒಡೆಯರ್ ತೋರಿಸಿಕೊಟ್ಟರು ಎಂದು ನಾಡೋಜ ಡಾ.ಮಹೇಶ ಜೋಶಿಯವರು ತಿಳಿಸಿದರು. ಅವರ ಹೆಸರಿನಲ್ಲಿ ಬೆಂಗಳೂರಿನಲ್ಲಿ ಸ್ಥಾಪಿತವಾಗಿರುವ ನರಸಿಂಹ ರಾಜ ಕಾಲೋನಿಯಲ್ಲಿ ತಮ್ಮ ಬಾಲ್ಯವನ್ನು ಕಳೆದ ಬಗ್ಗೆ ನಾಡೋಜ ಡಾ.ಮಹೇಶ ಜೋಶಿ ಸಂತೋಷವನ್ನು ವ್ಯಕ್ತ ಪಡಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟಣಾ ವಿಭಾಗದ ಸಂಚಾಲಕರಾದ ಎನ್.ಎಸ್.ಶ್ರೀಧರ ಮೂರ್ತಿಯವರು ಮಾತನಾಡಿ ಶ್ರೀಮದ್ಯುಯವರಾಜರಿಗೆ ಚಿತ್ರಕಲೆಯಲ್ಲಿ ಉತ್ತಮ ಅಭಿರುಚಿ ಇತ್ತು. ಅವರು ಭರತ ನಾಟ್ಯ, ಮಣಿಪುರಿ, ಕಥಕ್ಕಳಿ ಮುಂತಾದ ನೃತ್ಯಗಳನ್ನು ಬಲ್ಲವರಾಗಿದ್ದರು. ಪಾಶ್ಚಾತ್ಯ ಸಂಗೀತವನ್ನು ಬಲ್ಲವರಾಗಿದ್ದ ಅವರು ಬ್ಯಾಂಡ್ ಸಂಗೀತವನ್ನು ಮೈಸೂರು ಅರಮನೆಗೆ ಪರಿಚಯ ಮಾಡಿ ಕೊಟ್ಟರು. ವೀಣೆ ಮತ್ತು ಪಿಯಾನೋವನ್ನು ಸೊಗಸಾಗಿ ನುಡಿಸ ಬಲ್ಲವರಾಗಿದ್ದರು. ಸಿನಿಮಾದಲ್ಲಿಯೂ ಆಸಕ್ತರಾಗಿದ್ದ ಅವರ ಪ್ರೋತ್ಸಾಹದಲ್ಲಿಯೇ ಟಿ.ಪಿ.ಕೈಲಾಸಂ ಮೃಚ್ಛಕಟಿಕ ಮೂಕಿ ಚಿತ್ರವನ್ನು ರೂಪಿಸಿದ್ದರು. ಗುಬ್ಬಿ ಕಂಪನಿಯು ಸಂಕಷ್ಟದಲ್ಲಿ ಸಿಲುಕಿದಾಗ ಯುವರಾಜರು ನೆರವಿಗೆ ಬಂದು ಕಂಪನಿಯ ಬೆಳವಣಿಗೆಗೆ ಕಾರಣರಾದರು ಎಂದು ಅವರ ಕೊಡುಗೆಗಳನ್ನು ಸ್ಮರಿಸಿ ಕೊಂಡರು.

ಕನ್ನಡ ಸಾಹಿತ್ಯ ಪರಿಷತ್ತಿನ ಕೋಶಾಧ್ಯಕ್ಷರಾದ ಬಿ.ಎಂ.ಪಟೇಲ್ ಪಾಂಡು, ಕಾರ್ಯದರ್ಶಿಗಳಾದ ನೇ.ಭ.ರಾಮಲಿಂಗ ಶೆಟ್ಟಿ, ಡಾ.ಪದ್ಮಿನಿ ನಾಗರಾಜು, ಪ್ರೊ.ನಟರಾಜ್ ಮತ್ತು ಪರಿಷತ್ತಿನ ಸಿಬ್ಬಂದಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಯುವರಾಜ ಕಂಠೀರವ ನರಸಿಂಹ ರಾಜ ಒಡೆಯರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನವನ್ನು ಸಲ್ಲಿಸಲಾಯಿತು.

**ಎನ್.ಎಸ್.ಶ್ರೀಧರ ಮೂರ್ತಿ**

ಸಂಚಾಲಕರು, ಪ್ರಕಟಣಾ ವಿಭಾಗ, ಕನ್ನಡ ಸಾಹಿತ್ಯ ಪರಿಷತ್ತು.